ಒಂದು ಕಟ್ಟಡ ಬಂದಿರುವುದರಿಂದ ಎಲ್ಲೋ ಒಂದು ಕಡೆ ಅದು ಲೋಪವಾಗತ್ತದೆ. ಆದ್ದರಿಂದ ತಮ್ಮ ಮೂಲಕ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ. ಆ ಕಟ್ಟಡಕ್ಕೆ ಕೆಂಗಲ್ ಹನುಮಂತಯ್ಯ ಭವನ ಎಂದು ತಾವು ಹೆಸರನ್ನು ಇಡುತ್ತೀರಾ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಇವತ್ತು ಆ ಪ್ರಶ್ನೆ ಇಲ್ಲ, ಪ್ರಶ್ನೆ ಬಂದಂಥ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕೆಂಗಲ್ ಹನುಮಂತಯ್ಯ ಭವನ ಎಂದು ಅಷ್ಟೆ, ಹೊಸದು ಎನೂ ಇಲ್ಲ. ಕೆಂಗಲ್ ಹನುಮಂತಯ್ಯನವರಿಗೆ ಲೋಪವಾಗಬಾರದು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳುವುದೇನೆಂದರೆ, ಯಾವುದೋ ಒಂದು ಪ್ರಶ್ನೆ, ಈ ಪ್ರಶ್ನೆಗೆ ಈ ತರಹ ಲಂಬಿಸಿದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇದೊಂದು ಸ್ಟೇಟ್ ಇಷ್ಯೂ ಇದನ್ನು ಚರ್ಚೆ ಮಾಡಿ ಏಕಾಏಕಿ ಎದ್ದು ಬಿಟ್ಟು ಉಪ ಪ್ರಶ್ನೆಯ ಮುಖಾಂತರ ಕೆಂಗಲ್ ಹನುಮಂತಯ್ಯ ಭವನ ಮಾಡಿ ಎಂದರೆ ಅವು ಹೇಗೆ ಡಿಸಿಷನ್ ತೆಗೆದುಕೊಳ್ಳುವುದಕ್ಕಾಗುತ್ತದೆ ಸ್ವಾಮಿ? ತಾವು ಮಂತ್ರಿಯಾಗಿದ್ದರೂ ಕೂಡ ಹಾಗೆ ಹೇಳುವುದಕ್ಕಾಗುತ್ತದೆಯೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಸೌಧ ವಿಧಾನಸೌಧವೆಂದ ತಕ್ಷಣ ಕಣ್ಣಿಗೆ ಕಾಣತಕ್ಕಂಥದ್ದು ಕೆಂಗಲ್ ಹನುಮಂತಯ್ಯನವರದ್ದು, ಅದರ ಪಕ್ಕದಲ್ಲಿ ಇದೇ ತರಹ ವಿನ್ಯಾಸ ಇರುವುದರಿಂದ ಅದಕ್ಕಾಗಿ ನಾನು ತಮ್ಮ ಮೂಲಕವಾಗಿ ಒತ್ತಾಯವನ್ನು ಮಾಡುತ್ತಿದ್ದೇನೆ. ಇಡೀ ಸದನ ಒಕ್ಕೋರಲಿನಿಂದ ಒತ್ತಾಯವನ್ನು ಮಾಡುತ್ತದೆ. ಕೆಂಗಲ್ ಹನುಮಂತಯ್ಯ ಭವನ ಎಂದು ಇಡಬೇಕು.

ಅಧ್ಯಕ್ಷರು : ಮಾನ್ಯ ಸಚಿವರು ಪರಿಶೀಲನೆ ಮಾಡುತ್ತೇನೆಂದು ಹೇಳಿರುತ್ತಾರೆ.

ರಾಜ್ಯ ಹೆದ್ದಾರಿ ಅತಿಕ್ರಮ ಮಾಡಿ ಆಶ್ರಯ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು

37 (288): ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿಗಳಲ್ಲಿ ಲೋಕೋಪಯೋಗಿ ಇಲಾಖೆಯ ಸ್ಥಳವನ್ನು ಅತಿಕ್ರಮಿಸಿ ಆಶ್ರಯ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಅಕ್ರಮ ಕಟ್ಟಡಗಳನನು ಕಿಡವಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಉತ್ತರದಲ್ಲಿ ಪ್ರಿಂಟ್ ಮಿಸ್ಟೇಕ್ ಆಗಿ ಹಾಗೆ ಕಳುಹಿಸಿದ್ದಾರೆ ಅಧಿಕಾರಿಗಳು. ನಾನು ಅತ್ರಿಕ್ರಮ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆಯೇ ಎಂದು ಪ್ರಶ್ನೆ ಕೇಳಿದರೆ, ಆಶ್ರಯ ಎಂದು ಅವರು ಉತ್ತರವನ್ನು ಕೊಟ್ಟಿದ್ದಾರೆ. ಅದು ಪ್ರಿಂಟ್ ಮಿಸ್ಟೇಕ್ ಆಗಿದೆ, ಬಹುಶಃ ಮೇಲ್ಗಡೆ ಕರೆಕ್ಷಾಗಿದೆ, ಕೆಳಗಡೆ ಪ್ರಿಂಟ್ ಮಾಡುವಾಗ

ಆಶ್ರಯ ಎಂದು ಪ್ರಿಂಟ್ ಮಾಡಿದ್ದಾರೆ, ಅದಕ್ಕಾಗಿ ಪ್ರಶ್ನೆಗೆ ಸರಿಯಾದಂಥ ಉತ್ತರ ಬಂದಿಲ್ಲ, ನನ್ನ ಉದ್ದೇಶ ಪ್ರಶ್ನೆ ಕೇಳಿರುವಂಥದ್ದು ರಾಜ್ಯ ಮತ್ತು ಲೋಕೋಪಯೋಗಿ ಹೆದ್ದಾರಿಗಳಲ್ಲಿ ಅತಿಕ್ರಮ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ ಈ ರಾಜ್ಯದಲ್ಲಿ, ಆ ಅತಿಕ್ರಮ ಕಟ್ಟಡಗಳನ್ನು ತೆರುವು ಮಾಡಿಸುವುದಕ್ಕೆ ಸರ್ಕಾರ ಯಾವರೀತಿಯಾದ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದಕ್ಕೆ ನಾನು ಪ್ರಶ್ನೆಯನ್ನು ಕೇಳಿರುತ್ತೇನೆ. ಪ್ರಿಂಟ್ ಮಾಡುವವರೋ ಅಥವಾ ಅಧಿಕಾರಿಗಳ ಮಿಸ್ಟೇಕ್‌ದಿಂದಲೊ ಆಶ್ರಯ ಎಂದು ಮಾಡಿಬಿಟ್ಟಿದ್ದಾರೆ. ನನ್ನ ಮೂಲ ಪ್ರಶ್ನೆ ಇದಾಗಿದೆ. ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಪಿಡಬ್ಲ್ಯೂಟಿ ರಸ್ತೆಗಳಲ್ಲಿ ಅತಿಕ್ರಮ ಕಟ್ಟಡಗಳು ಹೇರಳವಾಗಿ ಇವತ್ತು ನಿಂತುಬಿಟ್ಟಿವೆ. ಮುಖ್ಯವಾಗಿ ನಗರ ಪ್ರದೇಶಗಳಲ್ಲಿ, ತಾಲ್ಲೂಕು ಪ್ರದೇಶಗಳಲ್ಲಿ ಹೇರಳವಾಗಿ ನಿಂತುಬಿಟ್ಟಿವೆ. ಅವುಗಳನ್ನು ತೆರವು ಮಾಡಿಸದೆ ಹೋದರೆ ಇವತ್ತು ನೀವು ರಸ್ತೆಗಳನ್ನು ಏನು ಅಭಿವೃದ್ಧಿ ಮಾಡಿಸಬೇಕೆಂದು ಹೇಳುತ್ತಿದ್ದೀರಿ, ಅದನ್ನು ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ರಸ್ತೆ ಅಗಲವಾಗುವುದಿಲ್ಲ. ಸಂಚಾರಕ್ಕೆ ತೊಂದರೆಯಾಗುತ್ತದೆ ಸಂಪೂರ್ಣವಾಗಿ ಆ ಯೋಜನೆ ನಿಷ್ಫೀಯವಾಗುತ್ತದೆ, ಆ ಉದ್ದೇಶಕ್ಕಾಗಿ ನಾನು ಪ್ರಶ್ನೆ ಕೇಳಿರುವುದು, ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ಪರಿಶೀಲನೆ ಮಾಡಿ ರಾಜ್ಯ ಹೆದ್ದಾರಿಯಲ್ಲಿ ಎಲ್ಲಿ ಅತಿಕ್ರಮಣವಾಗಿದೆ ಅದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ

ಜಾಲ್ಸೂರು–ಸುಬ್ರಹ್ಮಣ್ಯ ರಸ್ತೆಯಲ್ಲಿ ಮುಳುಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾಡುವುದು

38 (157): ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಾಲ್ಸೂರು–ಸುಬ್ರಮಣ್ಯ ರಸ್ತೆಯಲ್ಲಿ ಸೋಣಂಗೇರಿ ಮತ್ತು ಕ್ಯೊಕುಳಿ ಎಂಬಲ್ಲಿ ಮುಳುಗು ಸೇತುವೆಗಳು ಇದ್ದು ಮಳೆಗಾಲದಲ್ಲಿ ಮಳೆ ನೀರು ಸೇತುವೆ ಮೇಲೆ ಹರಿಯುವುದರಿಂದ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಮುಳುಗು ಸೇತುವೆಯನ್ನು ಸರ್ವ ಋತು ಸೇತುವೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಇ) ಇದ್ದಲ್ಲಿ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಭಾರಿ ಮಳೆ ಆಗಿದ್ದಲ್ಲಿ ಕೆಲವಷ್ಟು ಸಮಯ ಸೇತುವೆ ಮುಳುಗಡೆ ಆಗಿರುವುದು ಹಾಗೂ ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಗೆಮನಕ್ಕೆ ಬಂದಿರುತ್ತದೆ.

ಆ) ಪ್ರಸ್ತಾಪಿತ ಸೇತುವೆಗಳನ್ನು ಅನುದಾನದ ಲಭ್ಯತೆಯನ್ನು ಆಧರಿಸಿ ಯಾವುದಾದರೂ ಯೋಜನೆಯಡಿಯಲ್ಲಿ ಸರ್ವಋತು ಸೇತುವೆಯನ್ನು ನಿರ್ಮಾಣ ಮಾಡಲು ಪರಿಶೀಲಿಸಲಾಗುವುದು.

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ನಾನು ಎರಡು ಭಾರಿ ಅಧಿವೇಶನದಲ್ಲಿ ಶಾಸಕನಾಗಿ ಆಯ್ಕೆಯಾಗಿ ಬಂದ ನಂತರವೂ ಇದೇ ಪ್ರಶ್ನೆಯನ್ನು ಕೇಳಿದ್ದೆ. ಈ ಬಾರಿಯೂ ಇದೇ